ಶ್ರೀ ಬಿ. ಸೋಮಶೇಖರ್:– ಮಾನ್ಯ ಹಂಪನಗೌಡರದ್ದು ನಿನ್ನೆ ಸಹ ಇದೇ ರೀತಿಯಾಯಿತು.

(ಗೊಂದಲ)

ಅಧ್ಯಕ್ಷರು:– ನಾನು ಏನೂ ಮಾಡುವುದಕ್ಕಾಗುವುದಿಲ್ಲ. ತಮ್ಮ ನಾಯಕರುಗಳು ಒಪ್ಪಿದ್ದಾರೆ, ಸರ್ಕಾರದವರು ಒಪ್ಪಿದ್ದಾರೆ, ದಯವಿಟ್ಟು ಸಹಕಾರ ಮಾಡಬೇಕು, ಮುಂದಿನ ಬುಧವಾರ ರೆಗ್ಯುಲರ್ ಪ್ರಶ್ನೆಗಳಾದ ಮೇಲೆ ಖಂಡಿತವಾಗಿ ತೆಗೆದುಕೊಳ್ಳುತ್ತೇವೆ. ಅದಕ್ಕೆ ಎಕ್ಸ್‌ಟ್ರಾ ಟೈಮ್ ಅಲಾಟ್‌ಮೆಂಟ್ ಮಾಡುವುದೆಂದು ತೀರ್ಮಾನವಾಗಿದೆ. ಮಾನ್ಯ ಖಾದ್ರಿಯವರೆ, ಚಂದ್ರಶೇಖರಪ್ಪನವರೆ ನಿಮ್ಮ ನಾಯಕರು ಹೇಳಿದರೆ ನೀವು ಕೇಳುವುದಿಲ್ಲವೇ? ಎಲ್ಲಾ ನಾಯಕರುಗಳನ್ನು ಕೇಳಿ ಇಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ಎಲ್ಲಾ ನಾಯಕರುಗಳು, ಹಾಗೂ ಸಂಸದೀಯ ಸಚಿವರು, ಎಲ್ಲರೂ ಸೇರಿ ತೀರ್ಮಾನ ತೆಗೆದುಕೊಂಡಿರುವುದು, ನಿಮ್ಮ ಪ್ರಶ್ನೆ ಲ್ಯಾಪ್ಸ್ ಆಗುವುದಿಲ್ಲ, ಮುಂದಿನ ಬುಧವಾರದ ದಿವಸ ರೆಗ್ಯುಲರ್ ಪ್ರಶ್ನೆಗಳು ಆದ ಮೇಲೆ ಈ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇವೆ. ದಯವಿಟ್ಟು ಕುಳಿತುಕೊಳ್ಳಿ. ಈಗ ಆನ್ ಸ್ಟಾರ್ಡ್ ಪ್ರಶ್ನೆಗಳು.

ಶ್ರೀ ಹಂಪನಗೌಡ ಬಾರ್ದಲಿ:– ಇವತ್ತು ಇನ್ನೂ ಐದು ಪ್ರಶ್ನೆಗಳು ಬಾಕಿ ಇದೆ.

ಅಧ್ಯಕ್ಷರು:– ಐದು ಪ್ರಶ್ನೆ ಇಲ್ಲ. ಸಭಾಪತಿಯವರು ಇಲ್ಲ, ಬೇರೆ ಕಡೆ ಹೋಗಿದ್ದಾರೆ, ಯಾವ್ಯಾವುದು ಉಳಿದಿದೆ ಅವೆಲ್ಲವನ್ನೂ ತೆಗೆದುಕೊಳ್ಳೋಣ ಬಿಡಿ.

1(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ 16–7–03ರ ಲಿಖಿತ ಮೂಲಕ ಉತ್ತರಿಸುವ 190 ಪ್ರಶ್ನೆಗಳ ಪೈಕಿ 180 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ–1)

ಅಧ್ಯಕ್ಷರು:– ಮಂಡಿಸಲಾಯಿತು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ "1964ರ ಕರ್ನಾಟಕ ಪೌರಾಡಳಿತ ಅಧಿನಿಯಮದ ಪ್ರಕರಣ 2, 94, 7, 101, 102, 103, 105, 110, 147, 150, 151ಕ್ಕೆ ತಿದ್ದುಪಡಿ ಮಾಡಿ ಹಾಗೂ ಪ್ರಕರಣ 94ಎ, 109ನ್ನು ಚ್ಯುತಿಗೊಳಿಸಿ ದಿನಾಂಕ 16–6–2003 ರಂದು ಹೊರಡಿಸಲಾದ ಡಿಪಿಎಎಲ್:56:ಶಾಸನ:2002ನೇ (2003ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ಸಂಖ್ಯೆಯ ಅಧ್ಯಾದೇಶ;

2. 1976ರ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ಸ್ ಅಧಿನಿಯಮದ ಪ್ರಕರಣ 2, 103, 106, 108, 109, 109ಎ, 110, 112, 112ಎ, 176, 178ಎ, 183, 346, 348, 351, 353, 373, 381, 443ಕ್ಕೆ ತಿದ್ದುಪಡಿ ಮಾಡಿ ಹಾಗೂ ಪ್ರಕರಣ 103ಎ, 148ನ್ನು ಚ್ಯುತಿಗೊಳಿಸಿ ದಿನಾಂಕ 16–6–2003 ರಂದು ಹೊರಡಿಸಲಾದ ಡಿಪಿಎಎಲ್:11:ಶಾಸನ:2003ನೇ (2003ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 4) ಸಂಖ್ಯೆಯ ಅಧ್ಯಾದೇಶಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕಾ ಹಾಗೂ ಹಜ್ ಸಚಿವರು): ಮಾನ್ಯ ಅಧ್ಯಕ್ಷರೆ, 1956ರ ಕಂಪನಿ ಕಾಯ್ದೆಯ ಅಧಿನಿಯಮ 619 (ಎ) ಪ್ರಕರಣದ ಮೇರೆಗೆ: